




# ಮರಗಳ ಲೈಬ್ರರಿ

ಪುಸ್ತಕಗಳ ಲೈಬ್ರರಿ ಬಗ್ಗೆ ನಮಗೆಲ್ಲಾ ಗೊತ್ತಿದೆ. ಆದರೆ ಮರಗಳ ಲೈಬ್ರರಿ ಇದೆ ಗೊತ್ತಾ? 18 ನೆಯ ಶತಮಾನದಲ್ಲಿ ಯಾವಾಗ ಆಧುನಿಕ ಅರಣ್ಯಗಳು ಜರ್ಮನಿಯಲ್ಲಿ ಶುರುವಾದವೋ ಆಗಲೇ ಅತ್ಯಂತ ಕುತೂಹಲಕರ ಲೈಬ್ರರಿಗಳು ಪ್ರಾರಂಭಗೊಂಡವು. ಉತ್ಸಾಹಿಗಳು ಬೇರೆ ಬೇರೆ ಮರಗಳ ಸ್ಯಾಂಪಲ್ ಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಆದರೆ ರೂಢಿಯಲ್ಲಿದ್ದ ನಾಟಾಗಳ ಸಂಗ್ರಹಣೆ ಶೈಲಿಯ ಬದಲಾಗಿ ಮರಗಳ ಮಾದರಿಗಳನ್ನು ಪುಸ್ತಕದ ರೂಪದಲ್ಲಿ ಸಂಗ್ರಹಿಸತೊಡಗಿದರು. ತೆರೆಯಬಹುದಾದ ಮರದ ಪುಸ್ತಕದೊಳಗಿನ ಟೊಳ್ಳು ಭಾಗದಲ್ಲಿ, ಸಸ್ಯವಿಜ್ಞಾನದ ಮೂಲ ಮರದ ಎಲೆ, ಬೀಜ, ಕಾಯಿ, ರೆಂಬೆಗಳು, ಹಣ್ಣು, ಹೂ, ತೊಗಟೆ ಮತ್ತು ಬೇರಿನ ತುಂಡುಗಳ ಮಾದರಿಗಳನ್ನು ಇಡಲಾಗುತ್ತಿತ್ತು.

ಇನ್ನು ಕೆಲವು ಕೇಸುಗಳಲ್ಲಿ ಮರದ ವಿವರಗಳು, ಅದಕ್ಕೆ ತಗಲಬಹುದಾದ ರೋಗಗಳ ಬಗ್ಗೆ ಬರಹಗಳನ್ನೂ ಇಡಲಾಗುತ್ತಿತ್ತು ಹಾಗೂ ಮರದ ಪುಸ್ತಕಗಳನ್ನೂ ಶೆಲ್ಫಿ ನಲ್ಲಿ ಜೋಡಿಸಿಡಲಾಗುತ್ತಿತ್ತು. ಪುಸ್ತಕಗಳ ಲೈಬ್ರರಿ ರೀತಿಯಲ್ಲೇ ಮರದ ಪುಸ್ತಕಗಳ ಬೆನ್ನಿನ ಭಾಗದಲ್ಲಿ ಲೇಬಲ್‌ಗಳನ್ನು ಬರೆಯಲಾಗುತ್ತಿತ್ತು. ಈ ರೀತಿಯ ಲೈಬ್ರರಿಗಳನ್ನು ಝೈಲೊಥಿಕ್ಸ್ ಎಂದು ಕರೆಯಲಾಗುತ್ತದೆ. ಗ್ರೀಕ್ ಭಾಷೆಯಲ್ಲಿ ಝೈಲೊಸ್ ಎಂದರೆ ಮರ ಹಾಗೂ ಥಿಕ್ಸ್ ಎಂದರೆ ಸಂಗ್ರಹಣೆ ಎಂಬರ್ಥವಿದೆ.

ಇಡೀ ಜಗತ್ತಿನಾದ್ಯಂತ ಮರಗಳ ಪುಸ್ತಕಗಳನ್ನು ಚೆನ್ನಾಗಿ ಸಂರಕ್ಷಿಸಿಟ್ಟಿರುವ ಝೈಲೊಥಿಕ್ಸ್‌ಗಳು ಹಲವಾರು ಸಂಖ್ಯೆಯಲ್ಲಿ ಇವೆ. ಇವುಗಳಲ್ಲಿ ಯೇಲ್ ವಿಶ್ವವಿದ್ಯಾಲಯದ ಸಾಮುಯಲ್ ಜೇಮ್ಸ್ ರೆಕಾರ್ಡ್ ಕಲೆಕ್ಷನ್ ಅತ್ಯಂತ ದೊಡ್ಡದು. ಇದರಲ್ಲಿ ಬೇರೆ ಬೇರೆ ಮರಗಳ 60,000 ಕ್ಕೂ ಹೆಚ್ಚು ಸಂಪುಟಗಳಿವೆ. ಎರಡನೆಯ ದೊಡ್ಡದಾದ ಝೈಲೊಥಿಕ್ಸ್ ,ಬೆಲ್ಜಿಯಂನ ಟವರ್‌ನ್‌ನಲ್ಲಿನ ರಾಯಲ್ ಮ್ಯೂಸಿಯಂ ಆಫ್ ಸೆಂಟ್ರಲ್ ಆಫ್ರಿಕಾದಲ್ಲಿ 57,000 ಕ್ಕೂ ಅಧಿಕ ಮರಗಳ ಮಾದರಿಗಳಿವೆ. ಹ್ಯಾಂಬರ್ಗ್‌ನಲ್ಲಿರುವ ಥುನೆನ್ ಇನ್ಸ್‌ಟಿಟ್ಯೂಟ್ ಆಫ್ ವುಡ್ ರಿಸರ್ಚ್‌ನಲ್ಲಿ 37,000ಕ್ಕೂ ಹೆಚ್ಚು ಮರದ ಮಾದರಿಗಳಿವೆ. ಒಟ್ಟಿನಲ್ಲಿ ಝೈಲೊಥಿಕ್ಸ್‌ಗಳು ಜ್ಞಾನಾಸಕ್ತರಿಗೆ ಮರಗಳ ಬಗ್ಗೆ ಅಪಾರ ಮಾಹಿತಿಯನ್ನು ಉಣ ಬಡಿಸುತ್ತಿವೆ.

■ ವಿದ್ಯಾ ವಿ. ಹಾಲಭಾವಿ